ಹೊತ್ತು ಇಷ್ಟೇಕೆ ಕೂಗುತ್ತವೆಯೊ ಏನೋ? ತಾನು ಅಪರಚಿತನೆಂದು ಚಾದಂಗಡಿ ಕಡೆ ಮುಖ ಮಾಡಿ ಅರಚುತ್ತಿವೆಯೊ ಹೇಗೆ? ಎದ್ದು ನೋಡಿ ಬರಲೆ? ತಾನು ಏಳಬೇಕೆನ್ನುವಾಗ ಯಾರೊ ಬಂದು 'ಏಯ್ ಹಚ್ಯಾ, ನಡೀ ಅತ್ಲಾಗ' ಎಂದ ಧ್ವನಿ ಕೇಳಿಸಿತು. ನಾಯಿಗಳು ದೂರಹೋದವು. ಯಾರ ಧ್ವನಿಯದು? ದುಂಡಪ್ಪಕಾಕಾನದಲ್ಲ. ಆತ ಹೆಚ್ಚಾಗಿ ರಾತ್ರಿ ಎದ್ದು ಬರುವುದಿಲ್ಲ.

ಯಾರಿರಬಹುದು? ಓಹ್! ಗೊತ್ತಾಯಿತು. ಹೊಟೇಲು ಹಸನು ಮಾಡಲು ಬಂದಿರುವ ಕೆಲಸಗಾರ! ಇಂದು ಇಲ್ಲಿಯೆ ಮಲಗಿಕೊಂಡಿದ್ದ. 'ಶಿವಣ್ಣ ಅಂತ. ಒಳ್ಳೇ ನಂಬಿಗಸ್ಥ. ನಿನ್ನ ಹೊಟೇಲ್ ಅಗದಿ ಶಿಸ್ತು ಮಾಡತಾನ. ನಿನ್ನ ದುಪ್ಪಟ್ಟು ಕೆಲಸ ಮಾಡತಾನ.' ಕಾಕಾ ಅವನನ್ನು ಪರಿಚಯಿಸಿ ಬಿಟ್ಟು ಹೋಗಿದ್ದ. ಅವನ ಜೊತೆ ಮಂಜು ಎನ್ನುವ ಇನ್ನೊಬ್ಬ ಹುಡುಗ. ಮಂಜು ತಿರುಗಿ ಮನೆಗೆ ಹೋಗಿದ್ದ. ಶಿವಣ್ಣ ಹೊರಗೆ ಹೊರಸಿನ ಮೇಲೆ ಮಲಗಿದ್ದನ್ನು ತಾನು ಮರೆತೆಬಿಟ್ಟಿದ್ದೆ. ಆತ ಎದ್ದು ಮೂತ್ರ ಮಾಡಿ ಬಂದನೆಂದು ಕಾಣುತ್ತದೆ. 'ದೇವಣ್ಣರ, ನಿಮ್ಮ ಚಾದಂಗಡಿಯೊಳಗ ನನಗೂ ದುಡಿಲಿಕ್ಕೆ ಅವಕಾಶ ಕೊಡ್ರಿ. ಈಗ ಕೆಲಸ ಕಡಿಮೆ ಆಗ್ಯಾವ. ಕೂಲಿಯೂ ಸಿಗವಲ್ದು.' ಸಂಜೆ ಶಿವಣ್ಣ ಕೇಳಿಕೊಂಡಿದ್ದ. 'ನೋಡೋಣ. ಹಂಗೇನಾದ್ರೂ ಇದ್ದರೆ ಹೇಳ್ತೇನಿ. ಒಂದಷ್ಟು ದಿನಾ ಕಳೀಲಿ. ಕೊಡಬಾರದು ಅಂತ ಇಲ್ಲ. ನನ್ನ ಜೋಡಿ ಯಾರಾದರೂ ಮಾಡಿಕೊಂಡವರು ಹೋಗಾವ್ರು ಸಿಕ್ಕರೆ ನನಗೂ ಚುಲೋ.'

ತನ್ನ ಆಶ್ವಾಸನೆಗೆ ಆತ ಕಣ್ಣಲ್ಲಿಯೆ ಕೃತಜ್ಞತೆ ಸೂಚಿಸಿದ್ದ. ಅವನೂ ಕೈಗೂಡಿಸಿದರೆ ಒಳ್ಳೆಯದೆ. ಅಡುಗೆಯೂ ಬರುತ್ತದೆ ಎಂದ. ಹೊಂಗಲದ ಒಂದು ಅಡುಗೆ ಟೀಮಿನಲ್ಲಿ ಇದ್ದನಂತೆ. ಮುಂಜಾನೆಯಿಂದ ಅವನು ಎಷ್ಟೊಂದು ಕೆಲಸ ಮಾಡಿದ. ಹೇಳಿದ ಕೆಲಸವನ್ನೆಲ್ಲ ಮಾಡುವ ದೈತ್ಯ. ಕಾಕಾ ಇವನನ್ನು ಕರೆತಂದಿದ್ದು ಒಳ್ಳೆಯದೇ ಆಯಿತು. ಅವನು ಇದ್ದಾನೆಂದು ತಾನು ಈ ರಾತ್ರಿ ಇಲ್ಲಿ ಮಲಗಲಿಕ್ಕೆ ಸಾಧ್ಯವಾಯಿತು. ಇಲ್ಲದಿದ್ದರೆ ಮರಳಿ ಹೊಂಗಲಕ್ಕೊ, ಶಿಂದೋಗಿಗೋ ಹೋಗಿಬಿಡುತ್ತಿದ್ದೆ! ತನ್ನದೆ ಮನೆಯಲ್ಲಿ ಮಲಗಲಿಕ್ಕೆ ತನಗೆ ಎಷ್ಟೊಂದು ಹೆದರಿಕೆಯಾಯಿತು. ಯಾಕೆ ತನ್ನನ್ನು ಭಯ ಮುತ್ತಿಕೊಂಡಿದೆ! ಮತ್ತೇನಾದರೂ ವಿಚಾರಣೆ ಮಾಡಬಹುದೆ? ಅಂತಹ ಸ್ಥಿತಿ ಮತ್ತೆ ಬರಲಿಕ್ಕಿಲ್ಲ. ಕೋರ್ಟಿನಲ್ಲಿ ಕೇಸು ಹೇಗೂ ನಿಕಾಲಿಯಾಗಿದೆಯಲ್ಲ! ದುರ್ಗ ಈಗ ಏನೂ ಹೇಳುವ ಸ್ಥಿತಿಯಲ್ಲಿಲ್ಲ. ಅವನಿಗೆ ಏನೂ ನೆನಪಿಲ್ಲ. ಪೋಲಿಸರೆದುರು ಎಂದೂ ತನ್ನ ಹೆಸರು ಹೇಳಿಲ್ಲ. ಅನಸೂಯೆಯ ಹೆಸರನ್ನೂ ಹೇಳಿಲ್ಲ. ದುರ್ಗನಿಗೆ ತನಗಿಂತ ಅನಸೂಯೆಯನ್ನು ಉಳಿಸಬೇಕಾಗಿತ್ತೆ ಮೊನ್ನೆ ತಾನು ಮತ್ತು ಕಾಕಾ ಅವನನ್ನು ನೋಡಲಿಕ್ಕಂದು ಅವನ ಮನೆಗೆ ಹೋಗಿ ಬಂದೆವು. ಅವನ ಒಂಟಿ ತಾಯಿಯ ಆರೈಕೆ ಅವನನ್ನು ಉಳಿಸಿದೆ. ಧಾರವಾಡದ ಮಾನಸಿಕ ದವಾಖಾನೆಯಲ್ಲಿ ಹಿಂದಿನ ದಿನವೇ ತೋರಿಸಿಕೊಂಡು ಬಂದಿದ್ದರು. ವರ್ಷದಿಂದ ಅದೇ ಗುಳಿಗೆಯನ್ನು ಕೊಡುತ್ತಿದ್ದಾರೆ. ಆ ಮಾತ್ರೆಯನ್ನು ಎರಡುಮೂರು ದಿನ ತೆಗೆದುಕೊಳ್ಳದಿದ್ದರೆ ಕುಳಿತಲ್ಲಿಯೇ ಏನೇನೋ ಒದರುತ್ತ, ಕಣ್ಣುಗುಡ್ಡೆ ಮೇಲೆ ಮಾಡಿ ಬಿದ್ದುಬಿಡುವನು. ಆಮೇಲೆ ಅವನ ಕೈಕಾಲಿನ ಬೆರಳು ಜಗ್ಗಿದಾಗ 'ಹಾಂ' ಎನ್ನುತ್ತಾನೆ. ಒಮ್ಮೊಮ್ಮೆ ಅದಕ್ಕೂ ಜಗ್ಗುವುದಿಲ್ಲ. ಆಗೆಲ್ಲ ಉಳ್ಳಾಗಡ್ಡಿ ಅಥವಾ ಬೆಳ್ಳುಳ್ಳಿಯ ಹೋಳನ್ನು ಬೆರಳಿನಿಂದ ಹಿಚುಕಿ ಆ ಘಾಟಿನ ವಾಸನೆಯನ್ನು ಮೂಗಿಗೆ ಹಿಡಿದಾಗ ಅವನ ಪ್ರಜ್ಞೆ ಮರಳುವುದು. ಆ ಅರ್ಧ ತಾಸು ಆತ ಏನು ಮಾತಾಡುತ್ತೇನೆಂದು ಗೊತ್ತೇ ಆಗುವುದಿಲ್ಲ. ಅವನ ಶಬ್ದಗಳಿಗೆ ಒಮ್ಮೊಮ್ಮೆ ಅರ್ಥ ಇರುತ್ತದೆ. ಮತ್ತೊಮ್ಮೆ ಇರುವುದಿಲ್ಲ. ಒಮ್ಮೊಮ್ಮೆ ಹೊಟ್ಟೆ ಹಸಿದಿದೆಯೆಂದು ಗಪಗಪ ತಿನ್ನುತ್ತಾನೆ. ಮತ್ತೊಮ್ಮೆ ಊಟದ ಗಂಗಾಳನ್ನು ಎತ್ತಿ ದೂರ ಒಗೆಯುವನು. ದುಂಡಪ್ಪಕಾಕಾ ತಮ್ಮ ಪರವಾಗಿ ಅವನ ತಾಯಿಯ ಕೈಯಲ್ಲಿ ಕೊಟ್ಟಿದ್ದ ನೋಟಿನ ಪೆಂಡಿಯನ್ನು ಆತ ಕಾಲಿಗೆ ಒರೆಸಿ ಒಗೆದಂತೆ!

ಅವನ ತಾಯಿಯ ಸ್ಥಿತಿಯನ್ನು ನೋಡಿದಾಗ ತಮಗೆ ಕೆಡುಕೆನಿಸುವುದು. ದುಂಡಪ್ಪ ಆಗ ತನ್ನ ಮುಖ ನೋಡುವನು. ದೇವಣ್ಣನೆ ಇದಕ್ಕೆ ಕಾರಣ ಎನ್ನುವ ಹಾಗೆ! ದುರ್ಗ ತನ್ನ ಕಡೆ ಕೆಲಸಕ್ಕೆ ಬರುತ್ತಿದ್ದ. ತಾನು ಹಾಕಿದ ಗೆರೆಯನ್ನು ದಾಟುತ್ತಿರಲಿಲ್ಲ. ತನ್ನ ಬಂಟನಾಗಿದ್ದ. ಹೊಟೇಲಿನಲ್ಲಿ ಏನಾದರೂ ಕಳ್ಳತನಗಿಳ್ಳತನವಾಗದಂತೆ ಎಚ್ಚರವಹಿಸು ಎಂದು ಅವನಿಗೆ ಅನೇಕ ಸಲ ಹೇಳುತ್ತಿದ್ದೆ. ಅದೇ ತರಹ ಆತ ತನಗೆ ವರದಿ ಮಾಡುತ್ತಿದ್ದ. ತಾನೇ ಒಮ್ಮೆ ಬಹಳ ಹೊತ್ತು ಕೂಡ್ರಿಸಿ ಕಂಡಕ್ಟರನ ವಿಷಯ ಕೇಳಿದಾಗ ಹಾಗೇನೂ ಇಲ್ಲ ಎಂದಿದ್ದ. ಅವರ ಸರಸ ಎಂದಾದರೂ ಕಣ್ಣಿಗೆ ಬಿದ್ದಿದೆಯೆ ಎಂಬ ಪ್ರಶ್ನೆಯನ್ನು ಉತ್ತರ ಕೊಡದೆ ತೇಲಿಸಿದ. 'ಕಂಡಕ್ಟರನದು ಬಹಳ ಧಿಮಾಕು ಆಗಿದೆ. ಅವನಿಗೆ ಸ್ವಲ್ಪ ಹೆದರಿಸಬೇಕು. ಏನು ಮಾಡೋಣ? ಯಾರ ಎದುರಿಗೂ ನೀ ಬಾಯಿ ಬಿಡಬ್ಯಾಡ.' ತಾನು ಎಚ್ಚರಿಕೆ ಕೊಟ್ಟೆ.

'ದೇವಣ್ಣಾರೆ, ನೀವು ಸುದ್ದಿ ಬಿಡ್ರಿ. ಅದು ಗಾಳಿ ಬೆಳಕು ಕತ್ತಲಕೂ ಗೊತ್ತಾಗಾಂಗಿಲ್ಲ. ಹಂಗ ಮಾಡ್ತೇನಿ.' ಕತ್ತಲೆಗೆ ಗೊತ್ತಾಗದ ಹಾಗೆ ಕತ್ತು ಕೊಯ್ಯುತ್ತೇನೆಂದು ಹೇಳಿದವನು ಮಟಮಟ ಮಧ್ಯಾಹ್ನ, ಬೆಳ್ಳಂಬೆಳಕಿನಲ್ಲಿ ರಕ್ತ ಹರಿಸುವುದೆ? ಅದೃಷ್ಟವಶಾತ್ ಕಂಡಕ್ಟರ್ ಒಡನೆ ಜಗಳಾಡಿ ಕುಡುಗೋಲು ಎಳೆದಿದ್ದಾನೆ. ಕೋರ್ಟಿನಲ್ಲಿ ಅದು ಅವರಿಬ್ಬರ ಜಗಳದಿಂದಾದ ಕೊಲೆಯೆಂದು ತೀರ್ಮಾನವಾಯಿತು. ಇಲ್ಲದಿದ್ದರೆ ಅದು ಮತ್ತೇನೊ ಆಗುತ್ತಿತ್ತು. ತನಗವನು ಎಂದೂ ಆ ತರಹ ಸೂಚನೆ ಕೊಟ್ಟಿರಲಿಲ್ಲ. ಹೀಗೆ ಮಾಡಬಹುದೆಂದು ತನಗೆಂದೂ ಅನಿಸಿರಲಿಲ್ಲ. ಸಣ್ಣಪುಟ್ಟ ಜಗಳಕ್ಕೆ ಒಬ್ಬರ ಜೀವ ತೆಗೆಯುತ್ತಾನೆಂದರೆ? ದುರ್ಗನೂ ಎಷ್ಟೊಂದು ಕ್ರೂರಿ ಎಂದಾಯಿತಲ್ಲ! ತನಗೀಗ ಅವನ ಮೇಲೆಯೆ ಸಂಶಯ ಮೂಡುತ್ತಿದೆ. ಅವನ ಉಕ್ಕುವ ಹರೆಯ ಅನಸೂಯೆಯನ್ನು ಸೆಳೆಯಿತೆ? ಕಂಡಕ್ಟರನಿಗೆ ದುರ್ಗನ ಮೇಲೆ ಶಂಕೆ ಮೂಡಿತ್ತೆ? ಇಲ್ಲವೆ ದುರ್ಗನ ಬಗ್ಗೆ ಕಂಡಕ್ಟರ ಅಸೂಯೆ ಬೆಳೆಸಿಕೊಂಡನೆ? ಈ ಪ್ರಶ್ನೆಗಳಿಗೆ ಉತ್ತರವೆ ಇರುವುದಿಲ್ಲವೇನೊ? ಅಂತಹ ಯಾವ ಇಂದ್ರಿಯ ಬಯಕೆಗಳನ್ನು ಅನಸೂಯೆ ತನ್ನ ವರ್ತನೆಯಲ್ಲಿ ತೋರಿಸಿಕೊಳ್ಳಲಿಲ್ಲ. ಅಥವಾ ತನಗೆ ಗೋಚರಿಸಲಿಲ್ಲವೊ! ಆಕರ್ಷಣೆ ಹೇಗೆ ಹುಟ್ಟಿಕೊಳ್ಳುತ್ತದೆಯೆಂದು ಹೇಳುವುದು ಕಷ್ಟ. ಇದೆಲ್ಲ ಭ್ರಮೆಯೆ? ಅನಸೂಯೆಯನ್ನು ಬಿಟ್ಟು ತಪ್ಪು ಮಾಡಿದೆನೆ? ಹೊಂಗಲದ ಹೊಟೇಲಿನಲ್ಲಿ ಕೆಲಸಕ್ಕಿದ್ದಾಗ ಇಂತಹ ಪ್ರಶ್ನೆಗಳೇ ಕಾಡುತ್ತಿದ್ದವು.

ಅನಸೂಯೆ ಈಗ ಮತ್ತೆ ನೆನಪಾಗುತ್ತಿದ್ದಾಳೆ. ತಾವು ಮೊದಲು ಎಷ್ಟೊಂದು ಅನ್ಯೋನ್ಯವಾಗಿದ್ದೆವು. ಮುಂದೆ ಎಷ್ಟೊಂದು ಭಿನ್ನತೆ ಹುಟ್ಟಿಕೊಂಡಿತು. ಅವಳು ಹೇಗೆಯೆ ಇರಲಿ. ಮನೆಯಲ್ಲಿ ಆಕೆಯೊಬ್ಬಳಿದ್ದಳು. ಎಲ್ಲ ನಡೆದುಹೋಗುತ್ತಿತ್ತು. ಅನಸೂಯೆ ಇಲ್ಲದ ಮನೆಯಲ್ಲಿ ಇರುವುದು ಎಷ್ಟೊಂದು ಕಷ್ಟದ ಕೆಲಸ! ತಾನು ಮತ್ತು ಆಕೆ ಆಗಿಂದಾಗ ಬೆಕ್ಕುಇಲಿಯಂತೆ ಜಗಳಾಡುತ್ತಿದ್ದರೂ ಮನೆಯಲ್ಲಿ ಆಕೆಯಿದ್ದರೆ ಒಂದು ರೀತಿಯ ಜೀವಗಮಿಸುವಿಕೆ ಇರುತ್ತಿತ್ತು. ತಪ್ಪು ಅವಳದಿತ್ತೋ? ತನ್ನದಿತ್ತೊ? ಕಂಡಕ್ಟರನನ್ನು ಆಕೆ ಯಾಕಾಗಿ ಸಾಯಿಸಿರಬಹುದು? ಅವನಿಗೆ ಬೇರೆ ಸಂಬಂಧವಿದೆಯೆಂದು ಸಂಶಯಪಟ್ಟಳೆ? ಆಥವಾ ಆಕೆ ಆಣೆ ಮಾಡಿ ಹೇಳಿದಂತೆ ಅವಳು ನಿಜವಾಗಿಯೂ ಅಮಾಯಕಳೆ? ಆಕೆ ಎಷ್ಟೊಂದು ಅತ್ತಳು! ಎಷ್ಟೊಂದು ಗೋಗರೆದಳು!

'ತವರುಮನೆಗೆ ಹೋಗು ಅಂತ ಹೇಳ್ರಿ, ಬ್ಯಾರೆ ಇರು ಅಂತ ಹೇಳ್ರಿ. ಆದ್ರ ಏನರೆ ಅಪವಾದ ಹೊರಿಸಿದ್ರಯಂದ್ರ ಮಕ್ಕಳ ಮ್ಯಾಲ ಆಣೆ ಐತಿ.' ಮಕ್ಕಳ ಬಗ್ಗೆಯೂ ತನ್ನ ಕಾಳಜಿ ಅಷ್ಟಕ್ಕಷ್ಟೆ ಎಂದು ಕಾಕಾ ತನ್ನನ್ನು ಆಮೇಲೆ ಬೈದ. 'ಅಲ್ಲೋ, ಆಕೀ ಮಕ್ಕಳ ಮ್ಯಾಲ ಆಣಿ ಮಾಡಿದ್ರೂ ಸುಮ್ಮನ ನಿಂದರ್ತಿ? ನಿನಗೆ ಸ್ವಲ್ಪಾನೂ ಮಾನ ಮರ್ಯಾದಿ, ನಾಚಿಕಿಪಾಚಿಕಿ ಇಲ್ಲೇನು? 'ಆಗಿದ್ದು ಆಗಿ ಹೋಗೇತಿ. ಇನ್ನಮ್ಯಾಲ ಹೊಂದಿಕೊಂಡು ಇರೋಣು. ಬಾ ಮನಿಗೆ' ಅಂತ ಅನಲಿಲ್ಲ ನೀನು. ನಿನ್ನ ಮನಸ್ಸು ಎಷ್ಟರೆ ಕಲ್ಲಿಂದೈತಿ." ಆತನೆ ಹೇಳಿದಂತೆ ತನ್ನ ಮನಸ್ಸು ಎಂದೂ ಕರಗದ ಕಲ್ಲಾಗಿದೆ. ಕಂಡಕ್ಟರನೆದುರೆ ತನ್ನನ್ನು ಉಪೇಕ್ಷೆ ಮಾಡಿದ್ದರ ಪ್ರತೀಕಾರ ತೀರಿಸಿಕೊಳ್ಳಬೇಕು. ಅವಳ ತಮ್ಮ ಕೋರ್ಟಿಗೆ ಹೋಗುವ ಎಚ್ಚರಿಕೆಯ ಮಾತು ಹೇಳಿದ್ದಾನೆ. ಬಹುಶಃ ಅದನ್ನು ಆಕೆಯೆ ಹೇಳಿಸಿರಬೇಕು. ಅದರಿಂದ ತನ್ನ ಛಲ ಮತ್ತೂ ಹೆಚ್ಚಾಯಿತು. ಬಿಗಡಾಯಿಸುತ್ತಿದ್ದ ಪರಿಸ್ಥಿತಿಯನ್ನು ದುಂಡಪ್ಪಕಾಕಾ ತಹಬಂದಿಗೆ ತಂದ.

'ದ್ಯಾವಣ್ಣ, ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕಂತ. ಅಂತಹದರಾಗ ನೀನು ಪ್ರತ್ಯಕ್ಷ ನೋಡಲಾರದೆ ಏನೇನೋ ಮಾತಾಡಿದ್ರ ಹೆಂಗ? ಏನೇನೊ ಮಾತಾಡಿ ಸಂಬಂಧಗಳನ್ನ ಹಾಳು ಮಾಡಿಕೊಬ್ಯಾಡ. ಸಿಟ್ಟಿನ ಕೈಯಾಗ ಬುದ್ಧಿ

